**ಪಿ ಡಬ್ಲ್ಯೂ : 6 - ಶಿವು**

ಸಾಕ್ಷಿಗೆ ದಿನಾಂಕಃ **04.10.2023** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ: ಎಪಿಪಿರವರಿಂದ:**

ಆ ದಿನ ನಕಲಿ ಪಾಸ್‌ನ್ನು ಬಳಸುತ್ತಿದ್ದ ವ್ಯಕ್ತಿ ಈ ಪ್ರಕರಣದಲ್ಲಿ ಈ ದಿನ ಹಾಜರಿರುವ ಆರೋಪಿಯೇ ಆಗಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಸ್.ವಿ.ಎಸ್. ವಕೀಲರಿಂದ :**

ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ದಿ: **10.04.2013** ರಂದು ಮಳವಳ್ಳಿ ಬೆಳಕವಾಡಿ ಮಾರ್ಗದ ಹೊಸಹಳ್ಳಿ ಕ್ರಾಸ್ ಬಳಿ ಬರುತ್ತಿದ್ದಾಗ ಬಸ್ ನ್ನು ತನಿಖಾಧಿಕಾರಿಗಳು ಅಡ್ಡಗಟ್ಟಿರುವುದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಂದರ್ಭ ಆರೋಪಿ ಇಲಾಖಾ ಸಮವಸ್ತ್ರ ಧರಿಸಿರಲಿಲ್ಲ. ಆರೋಪಿ ಸಂಸ್ಥೆಯ ಗುರುತಿನ ಚೀಟಿ ಇಟ್ಟುಕೊಂಡಿದ್ದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಉಚಿತ ಪಾಸ್‌ನ್ನು ಪಡೆದು ಸಿಬ್ಬಂದಿಯ ಫೋಟೋ ಮತ್ತು ಹೆಸರನ್ನು ಅಳಿಸಿ, ತನ್ನ ಫೋಟೋ ಮತ್ತು ಹೆಸರನ್ನು ಬರೆದುಕೊಂಡಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳು ಪಾಸ್‌ನ್ನು ವಶಪಡಿಸಿಕೊಂಡಿದ್ದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ **3** ಪಾಸ್‌ನ್ನು ನಾನು ಗುರುತಿಸುತ್ತೇನೆ ಎಂದು ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**2.** ಹೊಸಹಳ್ಳಿ ಕ್ರಾಸ್ ಬಳಿ ತನಿಖಾಧಿಕಾರಿಗಳು ಇಲಾಖಾ ವಾಹನದಲ್ಲಿ ಬಂದಿದ್ದರು. ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ತನಿಖಾಧಿಕಾರಿಗಳು ಬಸ್‌ನ್ನು ಪ್ರವೇಶಿಸಿದಾಗ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರ ದಾಖಲೆ ಪಡೆದಿರುತ್ತಾರೆ. ದಾಖಲೆ ಪಡೆದಿದ್ದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳು ಬಸ್‌ನಲ್ಲಿ ಫೋಟೋ ತೆಗೆದಿಲ್ಲ. ತನಿಖಾಧಿಕಾರಿಗಳು ಬಸ್‌ನ್ನು ಅಡ್ಡಗಟ್ಟಿದಾಗ ಮಧ್ಯಾಹ್ನ **2-30** ಆಗಿತ್ತು. ತನಿಖಾಧಿಕಾರಿಗಳು

ಬಸ್‌ನಿಂದ **10** ನಿಮಿಷದಲ್ಲಿ ದಾಸನಹಳ್ಳಿಯ ಬಳಿ ಇಳಿದು ಹೋಗಿರುತ್ತಾರೆ. ನಮ್ಮ ಬಸ್‌ನ್ನು ಯಾವುದೆ ತನಿಖಾಧಿಕಾರಿಗಳು ಅಡ್ಡಗಟ್ಟಿಲ್ಲ ಮತ್ತು ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಹೇಳಿದಂತೆ ನಮ್ಮ ಬಸ್‌ನಲ್ಲಿ ಆರೋಪಿ ಪ್ರಯಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ **2018** ರಲ್ಲಿ ಪೊಲೀಸರು ನನ್ನನ್ನು ಸಂಪರ್ಕಿಸಿರುತ್ತಾರೆ. ನಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಸುವರ್ಣ ನನಗೆ ಗೊತ್ತು. ಸುವರ್ಣಳಿಗೂ ಮತ್ತು ಆರೋಪಿಗೂ ಹಣಕಾಸಿನ ವಿಚಾರದಲ್ಲಿ ವೈಷಮ್ಯ ಇದೆ ಎಂದು ನನಗೆ ಗೊತ್ತಿಲ್ಲ. ಆ ಕಾರಣಕ್ಕೆ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಸುವರ್ಣಾಳಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಆ ದಿನ ನಾನು ಕರ್ತವ್ಯ ನಿರ್ವಹಿಸುತ್ತಿದ್ದ ಬಗ್ಗೆ ಪೊಲೀಸರು ನನ್ನಿಂದ ದಾಖಲೆಯನ್ನು ಪಡೆದುಕೊಂಡಿಲ್ಲ. ಆರೋಪಿ ನಮ್ಮ ಸಂಸ್ಥೆಗೆ ನಷ್ಟ ಮಾಡಿರುವುದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.